ವರ್ಷವೆಲ್ಲವೂ ಮೃಷ್ಟಾನ್ನ ತಿಂದು ಮರುವರ್ಷಕ್ಕೆ ಖಾಲಿ
ಕೂರುವ ಜಾಯಮಾನ ಶ್ರಮಿಕನಿಗೆ ಬರುವುದಿಲ್ಲ,
ಏಕೆಂದರೆ ಅವನ ಶ್ರಮ ಎಂದಿಗೂ ಬರಿದಾಗುವುದಿಲ್ಲ.
• ನೆಪೋಲಿಯನ್ ಹಿಲ್

ಕನ್ನಡಪ್ರಭ
ಭಾನುವಾರ 8.5.2016
ಬೆಂಗಳೂರು

6.45 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ | 6.49 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ ಪೂರೈಸಲು ಕೇಂದ್ರಕ್ಕೆ ಮನವಿ ಮಾಡಲು ನಿರ್ಧಾರ

# ರಸಗೊಬ್ಬರ, ಬಿತ್ತನೆ ಬೀಜ ದಾಸ್ತಾನಿಗೆ ಕ್ರಮ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಈ ವರ್ಷ ಉತ್ತಮ ಮುಂಗಾರು ನಿರೀಕ್ಷೆಯಲ್ಲಿರುವ ರಾಜ್ಯ ಸರ್ಕಾರ ರಸಗೊಬ್ಬರ ಹಾಗೂ ಬಿತ್ತನೆ ಬೀಜ ಕೊರತೆ ಉಂಟಾಗದಂತೆ ಮುಂಜಾಗ್ರತಾ ಕ್ರಮದ ಜತೆಗೆ ಹೆಚ್ಚಿನ ದಾಸ್ತಾನು ಮಾಡಲು ಮುಂದಾಗಿದೆ.

ಸಾಮಾನ್ಯವಾಗಿ ಪ್ರತಿ ವರ್ಷ ಅಂದಾಜು 6.45 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಇರುತ್ತದೆ. ಆದರೆ, ಈ ವರ್ಷ 6.49 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಮಂಡಿಸಲು ಕೃಷಿ ಇಲಾಖೆ ನಿರ್ಧರಿಸಿದೆ. ಜತೆಗೆ ಈಗಾಗಲೇ ಸರ್ಕಾರದ ಬಳಿ ಅಂದಾಜು 2.45 ಲಕ್ಷ ಟನ್ ರಸಗೊಬ್ಬರ ಹಾಗೂ ಮಾರುಕಟ್ಟೆಯಲ್ಲಿ 8 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಇದೆ.

ಸುದ್ದಿಗಾರರ ಜತೆ ಮಾತನಾಡಿದ ಕೃಷಿ ಸಚಿವ ಕೃಷ್ಣಬೈರೇಗೌಡ, ಕಳೆದ ಸಾಲಿನಲ್ಲಿ ಮುಂಗಾರು, ಹಿಂಗಾರು ಹಂಗಾಮಿನಲ್ಲಿ ಒಳ್ಳೆಯ ಮಳೆ ಬಾರದ ಹಿನ್ನೆಲೆಯಲ್ಲಿ ಬಿತ್ತನೆ ಮಾಡಿಯೂ ಫಸಲು ಬರಲಿಲ್ಲ. ಹೀಗಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ವರ್ಷ ಉತ್ತಮ ಮಳೆ ಬರುವ ನಿರೀಕ್ಷೆ ಇರುವುದರಿಂದ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಆಗುವ ಸಾಧ್ಯತೆಗಳಿವೆ. ಅದಕ್ಕೆ ಪೂರಕವಾಗಿ ರಸಗೊಬ್ಬರ, ಬೀಜ ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದರು.

**ಬಿತ್ತನೆ ಬೀಜಕ್ಕೆ ಸಿದ್ಧತೆ:** ಕಳೆದ 3 ವರ್ಷಗಳಿಂದ ಬಿತ್ತನೆ ಬೀಜ ಹಾಗೂ ರಸಗೊಬ್ಬರಕ್ಕೆ ಕೊರತೆ ಆಗಿಲ್ಲ, ಮುಂಗಾರು ಉತ್ತಮವಾಗಿರುತ್ತದೆ ಎಂಬ ನಿರೀಕ್ಷೆಯಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಬಿತ್ತನೆ ಬೀಜ ಪೂರೈಸುವ ಸಂಸ್ಥೆಗಳ ಜತೆ ದರ ಕಡಿಮೆ ಮಾಡುವಂತೆ ಚೌಕಾಶಿ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ನೀಡಿರುವ ಹಣದ ಜತೆಗೆ ರಾಜ್ಯ ಸರ್ಕಾರವು ಕುಡಿಯುವ ನೀರು, ಮೇವು ಸೇರಿದಂತೆ ಬರ ಪರಿಹಾರ ಕೆಲಸಗಳಿಗೆ ಹಣ ಖರ್ಚು ಮಾಡಿದೆ. ಕೇಂದ್ರ ಬಿಡುಗಡೆ ಮಾಡಿರುವ ಹಣದಲ್ಲಿ ಶೇ. 80ರಷ್ಟು ಈಗಾಗಲೇ ರೈತರ ಖಾತೆಗೆ ಆರ್‌ಟಿಜಿಎಸ್ ಮೂಲಕ ಸೇರಿದೆ. ಈ ಹಿಂದೆ ಕೇಂದ್ರ ಹಣ ಬಿಡುಗಡೆ ಮಾಡಿದ ನಾಲ್ಕೈದು ತಿಂಗಳು ಖಜಾನೆಯಲ್ಲಿಯೇ ಇರುತ್ತಿತ್ತು. ಈಗ ತಕ್ಷಣವೇ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಈ ವರ್ಷ ಕೇಂದ್ರ ಸರ್ಕಾರ ₹1852 ಕೋಟಿ ನೀಡಿದ್ದರೆ, ರಾಜ್ಯ ಸರ್ಕಾರ ₹2086 ಕೋಟಿ ನೀಡಿದೆ. ಇದರಲ್ಲಿ ಕುಡಿಯುವ ನೀರಿಗೆ ಬಿಡುಗಡೆ ಮಾಡಿದ ಹಣ ಸೇರಿಲ್ಲ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಸರ್ಕಾರದ ಅವಧಿಗಿಂತಲೂ ಈಗ ಬರ ಪರಿಸ್ಥಿತಿ ನಿರ್ವಹಣೆ ಚೆನ್ನಾಗಿ ನಡೆಯುತ್ತಿದೆ. ಬಿಜೆಪಿ ಅವಧಿಯಲ್ಲಿ ಕೇವಲ 3 ಸಭೆಗಳು ನಡೆದಿದ್ದರೆ ಈಗ 20 ಸಭೆಗಳು ಆಗಿವೆ. ಈ ಹಿಂದೆ ಸಚಿವ ಸಂಪುಟದ ಉಪ ಸಮಿತಿಗಳು ರಾಜ್ಯ ಪ್ರವಾಸ ಮಾಡಿರಲಿಲ್ಲ, ಈಗ 4 ತಂಡಗಳು ರಾಜ್ಯವ್ಯಾಪಿ ಪ್ರವಾಸ ಮಾಡಿವೆ ಎಂದು ಕೃಷ್ಣಬೈರೇಗೌಡ ಸಮರ್ಥಿಸಿಕೊಂಡರು.

- ಬಿತ್ತನೆ ಬೀಜ ಪೂರೈಸುವ ಸಂಸ್ಥೆಗಳ ಜತೆ ದರ ಕಡಿಮೆ ಮಾಡುವಂತೆ ಚೌಕಾಸಿ
- ಕೇಂದ್ರ ಸರ್ಕಾರ ನೀಡಿದ ₹1852 ಕೋಟಿ ಜತೆಗೆ ರಾಜ್ಯ ಸರ್ಕಾರ ₹2086 ಕೋಟಿ ನೀಡಿದೆ. ಇದರಲ್ಲಿ ಕುಡಿಯುವ ನೀರಿಗೆ ಬಿಡುಗಡೆ ಮಾಡಿದ ಹಣ ಸೇರಿಲ್ಲ.
- ಬರ ಪರಿಹಾರ ಕೆಲಸಗಳಿಗೆ ಕೇಂದ್ರ ಬಿಡುಗಡೆ ಮಾಡಿರುವ ಹಣದಲ್ಲಿ ಶೇ. 80 ಈಗಾಗಲೇ ರೈತರ ಖಾತೆಗೆ ಆರ್‌ಟಿಜಿಎಸ್ ಮೂಲಕ ಜಮಾ

## ರೈತರ ಉತ್ಪನ್ನಗಳಿಗೆ ಉಗ್ರಾಣ ನಿರ್ಮಾಣ: ಕೃಷಿ ಸಚಿವ

ಬೆಂಗಳೂರು: ರೈತರು ಮಾರುಕಟ್ಟೆಗೆ ತರುವ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದಿದ್ದರೆ ಆ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿಯೇ ಶೇಖರಿಸಲು 'ಉಗ್ರಾಣ ಆಧಾರಿತ ಮಾರಾಟ ಯೋಜನೆ'ಯಡಿ ರಾಜ್ಯದಲ್ಲಿ 15 ಲಕ್ಷ ಟನ್ ಸಾಮರ್ಥ್ಯದ ಉಗ್ರಾಣಗಳನ್ನು ನಿರ್ಮಿಸುವುದಾಗಿ ಕೃಷಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

**ಕೇಂದ್ರ ಬೆಂಬಲ ಘೋಷಿಸುವಾಗ ಆಯಾ ರಾಜ್ಯದಲ್ಲಿನ ಶ್ರಮವೆಚ್ಚವನ್ನು ಪರಿಗಣಿಸಬೇಕು. ಕರ್ನಾಟಕದ ರೈತರ ಶ್ರಮಕ್ಕೆ ಹೋಲಿಸಿದರೆ ಕೇಂದ್ರ ನೀಡುತ್ತಿರುವ ಬೆಂಬಲ ಬೆಲೆ ನಿರಾಶದಾಯಕ.**

• **ಡಾ ಪ್ರಕಾಶ್ ಕಮ್ಮರಡಿ**
ಅಧ್ಯಕ್ಷ, ಕೃಷಿ ಬೆಲೆ ಆಯೋಗ



ಕರ್ನಾಟಕ ರಾಜ್ಯ ಕೃಷಿ ಇಲಾಖೆ ಶನಿವಾರ ಆಯೋಜಿಸಿದ್ದ 'ಸುಸ್ಥಿರ ಕೃಷಿಗಾಗಿ ಕಡಿಮೆ ವೆಚ್ಚದ ತಾಂತ್ರಿಕತೆಗಳು' ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಕೃಷಿ ಸಚಿವ ಕೃಷ್ಣ ಬೈರೇಗೌಡ ಮತ್ತು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ ಮಾತುಕತೆಯಲ್ಲಿ ತೊಡಗಿದ್ದ ಕ್ಷಣ. ಕೃಷಿ ವಿವಿ ವಿಸಿ ಡಾ.ಎಚ್.ಶಿವಣ್ಣ ಇದ್ದಾರೆ

ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಕೃಷಿ ಬೆಲೆ ಆಯೋಗ ಮತ್ತು ಕೃಷಿ ತಂತ್ರಜ್ಞಾನ ಸಂಸ್ಥೆ ಆಶ್ರಯದಲ್ಲಿ ಶನಿವಾರ ಸುವರ್ಣ ಕೃಷಿ ಸಭಾಂಗಣದಲ್ಲಿ, ಆಯೋಜಿಸಿದ್ದ 'ಸುಸ್ಥಿರ ಕೃಷಿಗಾಗಿ ಕಡಿಮೆ ವೆಚ್ಚದ ತಾಂತ್ರಿಕತೆಗಳು' ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ರೈತ ತಾನು ಬೆಳೆದ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗಲಿ ಎಂಬ ಕಾರಣಕ್ಕೆ ಮಾರುಕಟ್ಟೆಗೆ ತರುತ್ತಾನೆ. ಆತ ಬಂದ ದಿನವೇ ಮಾರುಕಟ್ಟೆಯಲ್ಲಿ ಬೆಲೆ ಕುಸಿದರೆ ತಂದ ಉತ್ಪನ್ನವನ್ನು ವಾಪಸ್ ಕೊಂಡೊಯ್ಯಲು ಅನಗತ್ಯ ವೆಚ್ಚ ತಗಲುತ್ತದೆ. ಈ ಅವಾಂತರ ತಪ್ಪಿಸಲು ಮಾರುಕಟ್ಟೆಯಲ್ಲಿಯೇ ಉಗ್ರಾಣ ವ್ಯವಸ್ಥೆ ಮಾಡಲು ರಾಜ್ಯ ಸರ್ಕಾರ ಚಿಂತಿಸಿದೆ. ಇದುವರೆಗೆ 4 ಲಕ್ಷ ಟನ್ ಸಾಮರ್ಥ್ಯದ ಉಗ್ರಾಣಗಳಿದ್ದವು. ಈಗ ಸಹಕಾರ ಇಲಾಖೆಯ ಸಹಯೋಗದಲ್ಲಿ ರಾಜ್ಯದಲ್ಲಿ 15 ಲಕ್ಷ ಟನ್ ಸಾಮರ್ಥ್ಯದ ಉಗ್ರಾಣ ನಿರ್ಮಿಸಲಾಗುವುದು. 15 ದಿನ ಅಲ್ಲಿಯೇ ದಾಸ್ತಾನು ಮಾಡಿದ ರೈತನಿಗೆ ರಸೀದಿ ನೀಡಲಾಗುವುದು. ಆ ರಸೀದಿಯಿಂದ ಬ್ಯಾಂಕುಗಳಲ್ಲಿ ಉತ್ಪನ್ನದ ಶೇ. 85ರಷ್ಟು ಸಾಲ ಪಡೆಯುವ ಸೌಲಭ್ಯ ಕಲ್ಪಿಸಲಾಗಿದೆ. ಉತ್ಪನ್ನ ಮಾರಾಟ ಮಾಡಿದ ಬಳಿಕ ಬ್ಯಾಂಕ್ ಸಾಲ ತೀರಿಸಬಹುದು ಎಂದು ಸಚಿವರು ಮಾಹಿತಿ ನೀಡಿದರು.

ಕೃಷಿ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷ ಮಲ್ಲಪ್ಪ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ, ಕೃಷಿ ವಿವಿ ಕುಲಪತಿ ಪ್ರೊ.ಶಿವಣ್ಣ, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ. ಮಹೇಶ್ವರರಾವ್, ಕೃಷಿ ತಜ್ಞರಾದ ಡಾ. ಜಿ. ಈಶ್ವರಪ್ಪ, ಬಿ.ವೈ. ಶ್ರೀನಿವಾಸ ಭಾಗವಹಿಸಿದ್ದರು.

## ರಾಜ್ಯದಲ್ಲಿ 16 ಲಕ್ಷ ಟನ್ ಸಾಮರ್ಥ್ಯದ ಗೋದಾಮು: ಕೃಷ್ಣ ಬೈರೇಗೌಡ

# ₹ 700 ಕೋಟಿ ವೆಚ್ಚದಲ್ಲಿ ಉಗ್ರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಗ್ರಾಣ ಆಧಾರಿತ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯ ಮೂಲಕ ರೈತರಿಗೆ ನೆರವಾಗಲು ರಾಜ್ಯದ ವಿವಿಧೆಡೆ ₹ 700 ಕೋಟಿ ವೆಚ್ಚದಲ್ಲಿ 16 ಲಕ್ಷ ಟನ್ ಸಾಮರ್ಥ್ಯದ ಉಗ್ರಾಣ ನಿರ್ಮಿಸಲಾಗುವುದು' ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಕೃಷಿ ತಂತ್ರಜ್ಞರ ಸಂಸ್ಥೆ, ಕೃಷಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಕೃಷಿ ಬೆಲೆ ಆಯೋಗ ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಸುಸ್ಥಿರ ಕೃಷಿಗಾಗಿ ಕಡಿಮೆ ವೆಚ್ಚದ ತಾಂತ್ರಿಕತೆಗಳು' ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಬೆಲೆ ಕುಸಿದಿದ್ದರೂ ರೈತರು ಕೃಷಿ ಉತ್ಪನ್ನಗಳನ್ನು ಎಪಿಎಂಸಿಗಳಿಗೆ ತಂದು ಮಾರಾಟ ಮಾಡಲೇಬೇಕಾದ ಅನಿವಾರ್ಯ ಇದೆ. ಇದರಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಈ ನಷ್ಟ ತಪ್ಪಿಸಲು ಉಗ್ರಾಣಗಳನ್ನೇ ಉಪ ಮಾರುಕಟ್ಟೆಗಳನ್ನಾಗಿ ಘೋಷಿಸಲಾಗಿದೆ. ಉಗ್ರಾಣಗಳಲ್ಲಿಂದಲೇ ನೇರ ಆನ್‌ಲೈನ್ ಮೂಲಕ ಮಾರಾಟ ಮಾಡಬಹುದು' ಎಂದರು.

'ಕೃಷಿ ಯಂತ್ರೋಪಕರಣ ಬಾಡಿಗೆ ರೂಪದಲ್ಲಿ ನೀಡಲು ಕಳೆದ ವರ್ಷ 180 ಕೃಷಿ ಪರಿಕರ ಬಾಡಿಗೆ ಸೇವಾ ಕೇಂದ್ರ ತೆರೆಯಲಾಗಿತ್ತು, ಇನ್ನು ಎರಡು ತಿಂಗಳಲ್ಲಿ 350 ಕೇಂದ್ರ ತೆರೆಯಲಾಗುವುದು. 2 ವರ್ಷದೊಳಗೆ ಮಣ್ಣಿನ ತಪಾಸಣಾ ಮಾಹಿತಿಯುಳ್ಳ ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ರೈತರಿಗೆ ವಿತರಿಸಲಾಗುವುದು. ಪ್ರತಿ ಜಮೀನಿನ ಮಣ್ಣಿನ ಪರೀಕ್ಷೆಗೆ ₹300 ವೆಚ್ಚವಾಗಲಿದ್ದು, ಅದನ್ನು ಸರ್ಕಾರವೇ ಭರಿಸಲಿದೆ' ಎಂದರು.

### ಕೃಷಿ ಪರಿಕರ ಬಾಡಿಗೆ

'ಓಲಾ, ಉಬರ್ ಕಂಪೆನಿ ಸಾರಿಗೆ ಸೇವೆ ರೀತಿಯಲ್ಲೇ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ಹೇಳಿದರು.

'ಕೃಷಿ ಯಂತ್ರೋಪಕರಣಗ ಹೊಂದಿದ ಮಾಲೀಕರು ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಅಗತ್ಯವಿರುವ ಕೃಷಿಕರಿಗೆ ಬಾಡಿಗೆ ರೂಪದಲ್ಲಿ ಯಂತ್ರೋಪಕರಣ ನೀಡಲಾಗುವುದು. ಇದರಿಂದ ಯಂತ್ರೋಪಕರಣಗಳ ಸದ್ಬಳಕೆ ಆಗುತ್ತದೆ' ಎಂದರು.



'ಸುಸ್ಥಿರ ಕೃಷಿಗಾಗಿ ಕಡಿಮೆ ವೆಚ್ಚದ ತಾಂತ್ರಿಕತೆಗಳು' ಕುರಿತ ಕಿರು ಹೊತ್ತಗೆಯನ್ನು ಕೃಷ್ಣ ಬೈರೇಗೌಡ ಅವರು ಬಿಡುಗಡೆ ಮಾಡಿದರು. ಟಿ.ಎನ್. ಪ್ರಕಾಶ್ ಕಮ್ಮರಡಿ, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಚ್. ಶಿವಣ್ಣ, ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಮಲ್ಲಪ್ಪ ಇದ್ದಾರೆ –ಪ್ರಜಾವಾಣಿ ಚಿತ್ರ

doors, building